529(13) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಮಡಿಕೇರಿ ವಿಧಾನ ಸಭಾ ಕ್ಷೇತ್ರಗಳಲ್ಲಿರುವ ಪಡಿತರ ಚೀಟಿಗಳ ಸಂಖ್ಯೆ ಎಷ್ಟು;

ಆ) ಈಗ ಇರುವ ಪಡಿತರ ಚೀಟಿಗಳ ಸಂಖ್ಯೆ ಎಷ್ಟು;

ಇ) ಇನ್ನು ಎಷ್ಟು ಪಡಿತರ ಚೀಟಿಗಳ ಅವಶ್ಯಕತೆ ಇದೆ;

ಈ) ಹೊಸದಾಗಿ ಪಡಿತರ ಚೀಟಿಯ ಪಟ್ಟಿ ತಯಾರಿಸುವಾಗ ಯಾವ ನಿಯಮಗಳನ್ನು ಅನುಸರಿಸಲಾಗಿದೆ;

ಉ) ಕೂಲಿಗಾಗಿ ಕಾಳು ಯೋಜನೆಯಡಿ ಅಕ್ಕಿ ವಿತರಿಸಲು ಸರ್ಕಾರದ ನಿಯಮವೇನು;

ಊ) ಈ ನಿಯಮದಡಿ ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯವರು ಗ್ರಾಮ ಪಂಚಾಯ್ತಿಯವರಿಗೆ ಕಿರುಕುಳ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಇದನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

ಅ) ಮಡಿಕೇರಿ ವಿಧಾನ ಸಭಾ ಕ್ಷೇತ್ರಗಳಲ್ಲಿ 31–12–2004ರ ಅಖ್ಯೆರಿನಂತೆ ಈ ಕೆಳಕಂಡಂತೆ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ:

1) ಅಂತ್ಯೋದಯ ಅನ್ನ ಯೋಜನೆ	1001
2) ಹಳದಿ ಪಡಿತರ ಚೀಟಿ	12069
3) ಕೇಸರಿ ಪಡಿತರ ಚೀಟಿ	20915
ಒಟ್ಟು	**33985**

ಆ) 33985

ಇ) ಮನೆ ಮನೆ ಪುನರ್ ಸಮೀಕ್ಷೆ ಈಗಾಗಲೇ ಪ್ರಾರಂಭಿಸಲಾಗಿದ್ದು ಸದರಿ ಸಮೀಕ್ಷೆಯು ಏಪ್ರಿಲ್ 2005ಕ್ಕೆ ಮುಗಿಸುವ ನಿರೀಕ್ಷೆ ಮಾಡಿದ್ದು, ನಂತರವೇ ಎಷ್ಟು ಅರ್ಹ ಕುಟುಂಬಗಳು ಸೇರ್ಪಡೆಯಾಗುತ್ತವೆ ಎಂದು ತಿಳಿಯಬಹುದು.

ಈ) ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸುವಾಗ ಗ್ರಾಮಾಂತರ ಪ್ರದೇಶದಲ್ಲಿ ವಾರ್ಷಿಕ ಆದಾಯ ರೂ. 12000–00 ಹಾಗೂ ಪಟ್ಟಣ ಪ್ರದೇಶದಲ್ಲಿ ರೂ.17000–00ಕ್ಕಿಂತ ಕಡಿಮೆ ಆದಾಯ ಹೊಂದಿದ್ದು, ಈ ಕೆಳಕಂಡ ಮಾನದಂಡಗಳಿಗೆ ಒಳಪಡುವವರನ್ನು ಬಿ.ಪಿ.ಎಲ್. ಪಡಿತರ ಚೀಟಿಗಳ ಪಟ್ಟಿಯಲ್ಲಿ ಸೇರಿಸಲಾಗುವುದು. ಉಳಿದವರಿಗೆ ಎ.ಪಿ.ಎಲ್. ಪಡಿತರ ಚೀಟಗಳನ್ನು ನೀಡಲಾಗುವುದು;

ಮಾನದಂಡಗಳು:

1. 5.00 ಎಕರೆಗಿಂತ ಕಡಿಮೆ ಖುಷ್ಕಿ ಜಮೀನು ಅಥವಾ ತತ್ಸಮಾನ ತರೀ ಅಥವಾ ಭಾಗಾಯ್ತು ಜಮೀನು ಹೊಂದಿರುವ ಕುಟುಂಬಗಳು.
2. ಒಂದು ಲಕ್ಷ ರೂ.ಗಳವರೆಗೆ ಯಾವುದೇ ಸಹಕಾರಿ ಅಥವಾ ರಾಷ್ಟ್ರೀಕೃತ / ಗ್ರಾಮೀಣ ಬ್ಯಾಂಕುಗಳಲ್ಲಿ ಸಾಲ ಪಡೆಯದವರು.
3. ಯಾವುದೇ ಕಾರ್ಯ ನಿರ್ವಹಿಸದ ಕೊಳವೆ ಬಾವಿಗಳನ್ನು ಹೊಂದಿರುವ ಕುಟುಂಬಗಳು.
4. ಗ್ರಾಮೀಣ ಪ್ರದೇಶದಲ್ಲಿ ವಾರ್ಷಿಕ ರೂ. 12000–00 ಹಾಗೂ ಪಟ್ಟಣ ಪ್ರದೇಶದಲ್ಲಿ ವಾರ್ಷಿಕ ರೂ.17000–00 ಎಲ್ಲಾ ಮೂಲಗಳಿಂದ ಆದಾಯದ ಮಿತಿಗೆ ಒಳಪಟ್ಟ ಕುಟುಂಬಗಳು.
5. ಕುಟುಂಬದ ಸದಸ್ಯರು ಸರ್ಕಾರಿ / ಅರೆ ಸರ್ಕಾರಿ ಮತ್ತು ಸಾರ್ವಜನಿಕ ಉದ್ದಿಮೆಗಳ ನೌಕರರು ಇಲ್ಲದ ಕುಟುಂಬಗಳು ಮತ್ತು ಮಾಸಿಕ ಒಂದು ಸಾವಿರಕ್ಕಿಂತ ಕಡಿಮೆ ಆದಾಯವಿರುವ ಕುಟುಂಬಗಳು.
6. ಪೆಟ್ರೋಲ್ ಅಥವಾ ಡೀಸೆಲ್ ಚಾಲಿತ ವಾಹನಗಳನ್ನು ಹೊಂದಿಲ್ಲದ ಕುಟುಂಬಗಳು.
7. ದೂರವಾಣಿ ಅಥವಾ ಮೊಬೈಲ್ ಹೊಂದಿಲ್ಲದ ಕುಟುಂಬಗಳು.
8. ನೋಂದಾಯಿತ ಗುತ್ತಿಗೆದಾರರು / ಎ.ಪಿ.ಎಂ.ಸಿ. ವ್ಯಾಪಾರಸ್ಥರು / ಕಮಿಷನ್ ಏಜೆಂಟರುಗಳು, ಬಿತ್ತನೆ ಬೀಜ ಗೊಬ್ಬರಗಳ ವಿತರಕರು ಇತರೆ ವ್ಯಾಪಾರಿಗಳು ಇಲ್ಲದ ಕುಟುಂಬಳು.

ಉ) ಎಸ್.ಜಿ.ಆರ್.ವೈ. ವಿಶೇಷ ಘಟಕದಡಿಯಲ್ಲಿ ಜಿಲ್ಲಾಧಿಕಾರಿಗಳು / ರೆಗ್ಯುಲರ್ ಎಸ್.ಜಿ.ಆರ್.ವೈ ಘಟಕದಡಿಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಬಿಡುಗಡೆ ಮಾಡುವ ಅಕ್ಕಿಯನ್ನು ಜಿಲ್ಲೆಯ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ ಕಾರ್ಯಯೋಜನೆ ಪ್ರಕಾರ ಅಕ್ಕಿಯನ್ನು ಬಿಡುಗಡೆ ಮಾಡುವರು, ಅಂತಹ ಅಧಿಕಾರಿಗಳು ಪ್ರತಿ ಕೂಲಿಗಾರನಿಗೆ ದಿನಕ್ಕೆ ರೂ. 25.00 ನಗದು ಮತ್ತು 6 ಕೆ.ಜಿ. ಅಕ್ಕಿ ನೀಡುವರು.

ಊ) ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಗಮನಕ್ಕೆ ಬಂದಿಲ್ಲ.

ಋ) ಉದ್ಭವಿಸುವುದಿಲ್ಲ.

530(1224) ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ (ಕಲಘಟಗಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆಯ ಕಲಘಟಗಿಯಲ್ಲಿರುವ ಮಾರ್ಕೆಟಿಂಗ್ ಸೂಸೈಟಿಗಳ ಸಂಖ್ಯೆ ಎಷ್ಟು;